ನೀರಿನದೋ ಚರಂಡಿಯದೋ ಗಲಾಟೆಯಾಗಿದ್ದರೆ ಕಂಡು ಹಿಡಿದು, ಪೆಟಿಕೇಸ್ ಹಾಕಿಸಿಬಿಡುತ್ತಿದ್ದ. ಹಾಗಾಗಿ ಅವನಿಗೆ ಕೋರ್ಟ್ ವಲಯದಲ್ಲಿ 'ಪೆಟಿಕೇಸ್ ಪರಮೇಶಿ' ಎಂದೇ ಹೆಸರಾಗಿತ್ತು. ಅಂತಹ ಪರಮೇಶಿಯ ವಶಕ್ಕೆ ಬಂದ ಚಾಂಡಿಯ ಮಗ ರಿಂಗ್ ರೋಡ್ ಬಳಿ ಒಂದು ಟೀ ಕ್ಯಾಂಟೀನ್ ಮಾಡಿಕೊಂಡಿದ್ದ. ಅವನಿಗೆ ಕೆಲ ಪುಡಿರೌಡಿಗಳ ಸ್ನೇಹವಿತ್ತು.

ಮನೆ ಪಾಲಾಗಿ ಅಷ್ಟು ವರ್ಷಗಳು ಕಳೆದಿದ್ದರೂ ಚಾಂಡಿ ದೇವರಬನದ ಮೈದುನನ ಮನೆಯ ಕಡೆ ಒಮ್ಮೆಯೂ ಕಾಲು ಹಾಕಿರಲಿಲ್ಲ. ಕಾಳಮ್ಮನ ಆಪರೇಷನ್ ಆದಾಗಲೂ ಸಹಾ ಹೋಗಿ ನೋಡಿಕೊಂಡು ಬರಲು ಅವಳ ಅಹಂಕಾರ ಬಿಟ್ಟಿರಲಿಲ್ಲ. ಪುಟ್ಟೇಗೌಡನನ್ನೂ ಹೋಗಗೊಟ್ಟಿರಲಿಲ್ಲ.

ಮುಂಗಾರು ಸಮೀಪಿಸಿದಂತೆ ಮುದುಕಿಯ ಸ್ಥಿತಿ ಗಂಭೀರವಾಗತೊಡಗಿತ್ತು. ಅದು ಬದುಕಿರುವಾಗಲೇ ಒಮ್ಮೆ ಹೋಗಿ ನೋಡಿಬಂದುಬಿಡೋಣ ಎಂದು ಊರವರೆಲ್ಲಾ ದೇವರಬನದ ಮಂಜುನಾಥನ ಮನೆಗೆ ಹೋಗಿಬರತೊಡಗಿದರು. ಹಂಚಿನಮನೆ ಬಡ್ಡೆಯವರೆಲ್ಲಾ, ಮನೆಮಕ್ಕಳ ಸಮೇತ ಹೋಗಿಬಂದರು. ಮುದುಕಿಯ ಹಿರಿಯ ಮಗ ಪುಟ್ಟೇಗೌಡನಿಗೆ ಅವ್ವನ ಬಳಿ ಹೋಗಿ ನೋಡಿ ಬರದೇ ಇರಲು ಸಾಧ್ಯವಾಗಲಿಲ್ಲ. ಗೋಗರೆದು ಹೆಂಡತಿಯನ್ನು ಹೊರಡಿಸಿದ. ಅವರೊಂದಿಗೆ ಹಂಚಿನಮನೆ ನಿಂಗಣ್ಣನ ಸೊಸೆಯೂ ಹೊರಟಳು.

ಮುಖ್ಯರಸ್ತೆಗೆ ಕಾಲಿಡುತ್ತಲೇ ಎದುರಿಗೆ ಕಂಡ ದೇವರಬನ ಬಡಾವಣೆಯ ಆಧುನಿಕ ಕಟ್ಟಡಗಳು ಚಾಂಡಿಗೆ ದಿಗ್ಭ್ರಮೆ ಹುಟ್ಟಿಸಿದವು. ಅಂಗಡಿ ಬೀದಿಯ ಉದ್ದಕ್ಕೂ ನಿಂತ ವಾಹನಗಳು, ಆರ್‌ಸಿಸಿ ಕಟ್ಟಡಗಳು, ಕಾಂಪ್ಲೆಕ್ಸ್‌ಗಳು, ಪೆಟ್ರೋಲ್ ಬಂಕು, ವರ್ಕ್ ಶಾಪು, ಕಾಫಿಡಿಪೋ ಎಲ್ಲವನ್ನೂ ಕೌತುಕದಿಂದ ನೋಡುತ್ತಾ ನಡೆಯುತ್ತಿದ್ದ ಆಕೆಗೆ ಕೆರೆ ಏರಿಯ ರಸ್ತೆ ದಾಟುವಾಗ ಮುದುಕಿಯ ಪಾಲಿನ ಹಡ್ಲು ಯಾವುದು ಎಂದೇ ಗುರುತು ಹಿಡಿಯಲು ಆಗಲಿಲ್ಲ. ಆ ಜಾಗದಲ್ಲಿ ನೀರು ಸೀಯುವಂತೆ ಅಲ್ಲಲ್ಲಿ ಚರಂಡಿ ಹೊಡೆದು ಮಂಜುನಾಥ ಅಡಿಕೆ ಕೂರಿಸಿದ್ದ. ಅವುಗಳ ಬುಡದಲ್ಲಿ ಯಾಲಕ್ಕಿ ಸಸಿ ನೆಡಿಸಿದ್ದ. ಅಡಿಕೆ ಸಸಿಗಳು ಆಗಲೇ ಹೊಂಬಾಳೆ ನೂಕುತ್ತಿದ್ದವು. ಅದರ ತಗ್ಗಿನ ಗದ್ದೆಗಳೆಲ್ಲಾ ಸೈಟುಗಳ ರೂಪ ತಾಳಿ ಆಗಲೇ ಅಲ್ಲೆಲ್ಲಾ ಆರ್‌ಸಿಸಿ ಮನೆಗಳು ಏಳುತ್ತಿರುವುದನ್ನು ಕೌತುಕದಿಂದ ನೋಡುತ್ತಾ ದೇವರಬನದ ರಸ್ತೆಯಲ್ಲಿ ಯಾಂತ್ರಿಕವಾಗಿ ನಡೆದಿದ್ದಳು. ದೇವರಬನದ ಆಚೆಯ ದೀಣೆಯಲ್ಲಿ ಕುರೋವು ಕಾಣಲಿಲ್ಲ. ಅದು ಈಗ ಮಂಜುನಾಥನ ಕಾಫಿತೋಟ. ಆ ಐದೆಕರೆ ಕಾಫಿ ತೋಟದ ತುಂಬಾ ಕಾಫಿಗಿಡಗಳು ಹೂವರಳಿಸಿ ನಗುತ್ತಿವೆ!

ಆ ವೈಭವವನ್ನು ನೋಡಲು ಅವಳಿಂದ ಆಗಲಿಲ್ಲ. ಹೊಟ್ಟೆಯಲ್ಲಿ ಸಂಕಟ ಶುರುವಾಯಿತು. ಮುದುಕಿಯನ್ನು ನೋಡುವ ಶಾಸ್ತ್ರ ಮುಗಿಸಿ ಹಿಂತಿರುಗಿ ಹೊರಟಳು.

ಕೆರೆ ಏರಿಯ ಬಳಿ ಬಂದಾಗ ಚಾಂಡಿ ತಡೆದುನಿಂತಳು. ಯಾತಕ್ಕೂ ಕೆಲಸಕ್ಕೆ ಬಾರದ ಹಡ್ಲುಜಾಗ ಎಂದು ಅಸಡ್ಡೆ ಮಾಡಿ ಬಿಟ್ಟಿದ್ದ ಈ ಜಾಗ ಹೇಗೆ ಮಿರಿ ಮಿರಿ ಮಿಂಚುತ್ತಿದೆ ಎಂದು ಬೆರಗಾದಳು. ಅಲ್ಲಿಂದ ಎದುರಿಗೆ ಕಾಣುತ್ತಿದ್ದ ಅಂಗಡಿ ಬೀದಿಯ ವೈಭವ, ಕೆಳಗೆ ಗದ್ದೆ ಜಾಗದಲ್ಲಿ ಏಳುತ್ತಿದ್ದ ತಾರಸಿ ಮನೆಗಳು ಇವನ್ನೆಲ್ಲಾ ಕಣ್ತುಂಬಿಕೊಳ್ಳುತ್ತಿದ್ದ ನಿಂಗಣ್ಣನ ಸೊಸೆ 'ಅಲ್ನೋಡಿ ಆಂಟಿ, ಒಳ್ಳೆ ಪೇಟೆ ಆಗಿಹೋಗಿದೆ ಈ ಕಡೆ ಊರು. ಈ ಕೆಳಗಿನ ಜಾಗ ನೋಡಿ, ಗದ್ದೆ ಬಯಲು ಇದ್ದಿದ್ದೇ ಗೊತ್ತಾಗ್ತಾ ಇಲ್ಲ. ಅದೇ ಒಂದು ಬಡಾವಣೆ ಆಗ್ತಾ ಐತೆ. ಅಲ್ಲಿ ಜಮೀನಿದ್ದವ್ರಿಗೆ ಒಳ್ಳೆ ಚಾನ್ಸು. ಗುಂಟೆಗೆ ಮೂರ್ನಾಲ್ಕು ಲಕ್ಷ ಕೊಡ್ತೀವಿ ಅಂದ್ರೂ ಅಲ್ಲಿ ಜಾಗ ಸಿಕ್ಕದಿಲ್ವಂತೆ. ಈಗ ನಿಮ್ಮನೆದೇ ಈ ಅಡಿಕೆ ಗಿಡ ಹಾಕಿರ ಜಾಗ, ಏನಿಲ್ಲ ಅಂದ್ರೂ ಒಂದೂವರೆ ಕೋಟಿ ಬೆಲೆಬಾಳುತ್ತೆ' ಎಂದಳು. ಮೈದುನನ ಕಾಫಿ ತೋಟ ನೋಡಿದಾಗಿನಿಂದ ಸಂಕಟ ಅನುಭವಿಸುತ್ತಿದ್ದ ಚಾಂಡಿಯ ಹೊಟ್ಟೆಗೆ ಬೆಂಕಿಯೇ ಬಿದ್ದಂತಾಯಿತು.

ಕೋಟ್ಯಂತರ ಬೆಲೆಬಾಳುವ ಆಸ್ತಿ ಅನ್ಯಾಯವಾಗಿ ದಾಯಾದಿಗಳ ಪಾಲಾಗಿ ಹೋಯಿತಲ್ಲ. ಈಗ ಯೋಚಿಸಿ ಏನು ಮಾಡುವುದು?

ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು ಎಂದು ತಲೆಕೆರೆದುಕೊಂಡಳು. ಗಂಡ ಪುಟ್ಟೇಗೌಡ ನಡುಮನೆಯಲ್ಲಿ ಬೀಡಿಸೇದುತ್ತಾ ಕುಳಿತಿದ್ದ. ಅವನ ಹತ್ತಿರ ಮಾತಾಡಿ ಏನೂ ಪ್ರಯೋಜನವಿಲ್ಲ ಎನಿಸಿತು. ಮೊಬೈಲ್ ಫೋನ್ ತೆಗೆದುಕೊಂಡು ಅಣ್ಣನ ಮಗನಿಗೆ ಫೋನ್ ಮಾಡಿ ತನ್ನ ಗೋಳು ತೋಡಿಕೊಂಡಳು. ವಿವರವನ್ನೆಲ್ಲಾ ತಿಳಿದುಕೊಂಡ ಪೆಟಿಕೇಸ್ ಪರಮೇಶಿಗೆ